ದಿನಾಂಕ 27-03-2025 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ಮಹಜರ್ ನ್ನು ನೋಡಿದರೆ ಗುರುತಿಸಬಲ್ಲೇ. ಈಗ ನನಗೆ ತೋರಿಸಿದ ಮಹಜರ್ ನಲ್ಲಿ ನನ್ನ ಸಹಿ ಇದೆ. ಸಾಕ್ಷಿ ತಮ್ಮ ಸಹಿ ಗುರುತಿಸಿದ ಮಹಜರ್ ಸಿಸಿ ನಂ.54/2013 ರ ಕಡತದಲ್ಲಿ ಇದ್ದು ಸದರಿ ಕಡತವನ್ನು ಈ ದಿನ ಪೆಂಡಿಂಗ್ ಬ್ರಾಂಚ್ ನಿಂದ ತರಿಸಿಕೊಂಡಿದ್ದು ಸದರಿ ಮೂಲ ಮಹಜರ್ ನ್ನು ನಿಪಿ-22 ಎಂದು, ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು. ನಿಪಿ-22 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ನೀಡಿಲ್ಲ. ಯಾವುದೇ ವ್ಯಕ್ತಿಗಳನ್ನು ತೋರಿಸಿಲ್ಲ.

(ಮಾನ್ಯ ಎ.ಪಿ.ಪಿ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

ಪಾಟೀ ಸವಾಲು ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

ದಿನಾಂಕ 02.03.2013 ರಂದು ಚಾಸಾ-14 ರವರು ನನ್ನನ್ನು ರಾಮನಗರ ಗ್ರಾಮಾಂತರ ಪೋ.ಠಾಣೆ ಬರಮಾಡಿಕೊಂಡು ಆರೋಪಿತರನ್ನು ತೋರಿಸಿ, ಇವರು ಚಾಸಾ-1 ರವರ ಮನೆಯಲ್ಲಿ ಮಲಗಿದ್ದಾಗ ಅವರ ಕುತ್ತಿಗೆಯಲ್ಲಿದ್ದ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹಾಗೂ ಜಾಲಮಂಗಲದ ಬಳಿ ರಸ್ತೆಯಲ್ಲಿ ನಡೆದು ಹೋಗುತ್ತಿದ್ದ ಒಬ್ಬ ಮಹಿಳೆಯ ಚಿನ್ನದ ಸರವನ್ನು ಸುಲಿಗೆ ಮಾಡಿಕೊಂಡು ಅವುಗಳನ್ನು ಬೆಂಗಳೂರು ನಗರ ಹೆಬ್ಬಾಳ ಕೆಂಪಾಪುರದಲ್ಲಿರುವ ಗಿರವಿ ಅಂಗಡಿಗೆ ಮಾರಾಟ ಮಾಡಿದ್ದಾರೆಂದು

ತಿಳಿಸಿರುತ್ತಾರೆಂದರೆ ಸರಿಯಲ್ಲ. ನಂತರ ನನ್ನನ್ನು ಅವರೊಂದಿಗೆ ಕರೆದುಕೊಂಡು ಆರೋಪಿತರು ತೋರಿಸಿದಂತೆ ಬೆಂಗಳೂರು ನಗರ ಹೆಬ್ಬಾಳದಲ್ಲಿರುವ ಕೆಂಪಾಪುರದಲ್ಲಿರುವ ಧನಲಕ್ಷ್ಮಿ ಎಂಟರ್ ಪ್ರೈಸಸ್ ಗಿರವಿ ಅಂಗಡಿಗೆ ಕರೆದುಕೊಂಡು ಹೋಗಿರುತ್ತಾರೆಂದರೆ ಸರಿಯಲ್ಲ. ಅಲ್ಲಿ ಚಾಸಾ-4 ರವರು ಹಾಜರಿದ್ದು ಆರೋಪಿತರನ್ನು ಗುರುತಿಸಿ ಆರೋಪಿತರನ್ನು ಸದರಿ ಚೈನನ್ನು ಖರೀದಿ ಮಾಡಿರುವುದಾಗಿ ಒಪ್ಪಿಕೊಂಡಿರುತ್ತಾರೆಂದು ಸರಿಯಲ್ಲ. ಚಾಸಾ-4 ರವರು 2 ಚಿನ್ನದ ಮಾಂಗಲ್ಯ ಸರವನ್ನು ಹಾಜರುಪಡಿಸಿದ್ದು ಅವುಗಳನ್ನು ಪೊಲೀಸರು ನನ್ನ ಹಾಗೂ ಚಾಸಾ-3 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.15 ರವರೆಗೆ ನಿಪಿ-22 ರಂತೆ ಮಹಜರ್ ಕ್ರಮ ಜರುಗಿಸಿ ಅಮಾನತ್ತು ಪಡಿಸಿ ಕೊಂಡಿರುತ್ತಾರೆಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆಂದರೆ ಸರಿಯಲ್ಲ. ಹೇಳಿಕೆಯನ್ನು ಈಗ ನಿಪಿ-23 ಎಂದು ಗುರುತಿಸಲಾಯಿತು. ಆರೋಪಿತರಿಗೆ ಸಹಾಯ ಮಾಡಲೆಂದು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-22 ರನ್ನು ದೃಢೀಕರಿಸಿ, ಮೂಲ ಪ್ರಕರಣ ಸಿಸಿ 54/2013 ರಲ್ಲಿ ಇಟ್ಟು, ದೃಢೀಕೃತ ಪ್ರತಿಯನ್ನು ಈ ಪ್ರಕರಣದಲ್ಲಿ ತೆಗೆದುಕೊಳ್ಳಲಾಯಿತು. ಹೇಳಿಕೆಯನ್ನು ಈಗಾಗಲೇ ನಿಪಿ-17 ಎಂದು, ಚಾಸಾ ರವರು ಮುಖಾಂತರ ಗುರುತಿಸಲಾಗಿದೆ.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಲೋಕೇಶ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.
ರಾಮನಗರ.